ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿಃ 1188/2024
ಸಿ.ಡಬ್ಲ್ಯು 7
ಪಿ.ಡಬ್ಲ್ಯು 5

| | | |
|---|---|---|
| ಸಾಕ್ಷಿದಾರರ ಹೆಸರು | : | ಸುಬ್ಬಣ್ಣ ಬಿ . |
| ತಂದೆಯ ಹೆಸರು | : | ಮಂಜು |
| ವಯಸ್ಸು | : | 60 ವರ್ಷ, |
| ಉದ್ಯೋಗ | : | ನಿವೃತ್ತ ಪಿ. ಎಸ್ ಐ |
| ವಾಸಸ್ಥಳ | : | ಕುಂದಾಪುರ |

**ದಿನಾಂಕಃ 15-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸ. ಅಭಿಯೋಜಕರಿಂದಃ**

ನಾನು ದಿಃ 01-06-2019 ರಿಂದ ದಿಃ 10-07-2020 ರವರೆಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪಿ. ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನಾನು ದಿನಾಂಕ 02-11-2019 ರಂದು ಈ ಪ್ರಕರಣದ ಕಡತವನ್ನು ಚಾಸಾ 6 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಚಾಸಾ 1 ರವರು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನನ್ನ ಮುಂದೆ ತಂದು ಹಾಜರು ಪಡಿಸಿದ್ದು, ಅವರನ್ನು ವಿಚಾರಿಸಿದಾಗ ಅವರು ತಮ್ಮ ತಪ್ಪನ್ನು ಒಪ್ಪಿ ಕೊಂಡ ಕಾರಣ ಚಾಸಾ 4 ಮತ್ತು 5 ರವರನ್ನು ಠಾಣೆಗೆ ಬರಮಾಡಿಕೊಂಡು, ದಸ್ತಗಿರಿ ಪಂಚನಾಮೆಯನ್ನು ಜರುಗಿಸಿ ಆರೋಪಿತರನ್ನು ದಸ್ತಗಿರಿ ಮಾಡಿದೆನು. ನಂತರ ಆರೋಪಿತರನ್ನು ಪಡುಬಿದ್ರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಪರೀಕ್ಷೆಗಾಗಿ ಕಳುಹಿಸಿಕೊಟ್ಟೆನು. ವೈದ್ಯಕೀಯ ಪರೀಕ್ಷೆಯ ನಂತರ ರಿಮ್ಯಾಂಡ್ ಅರ್ಜಿಯೊಂದಿಗೆ ಆರೋಪಿತರನ್ನು ಸಿಬ್ಬಂದಿಯವರ ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಕಳುಹಿಸಿದೆನು. ಸಾಕ್ಷಿಯವರು ದಸ್ತಗಿರಿ ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ

ಗುರುತಿಸಿದ್ದು ದಸ್ತಗಿರಿ ಪಂಚನಾಮೆಯನ್ನು ನಿಪಿ 4 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ 1ರವರು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ 4 ಮತ್ತು 5ರವರನ್ನು ಪಂಚರನ್ನಾಗಿ ಮಾಡಿಕೊಂಡು ಬೆಳಿಗ್ಗೆ 10.00 ಗಂಟೆಯಿಂದ 10.45 ರವರೆಗೆ ಪಂಚನಾಮೆಯನ್ನು ಜರುಗಿಸಿದೆನು. ಸಾಕ್ಷಿಯವರು ಸ್ಥಳ ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದ್ದು ಸಾಕ್ಷಿ ಯವರ ಸಹಿಯನ್ನು ನಿಪಿ.2 ಸಿ ಎಂದು ಗುರುತಿಸಲಾಯಿತು. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ ಚಾಸಾ 2 ರಿಂದ 5ರವರನ್ನು ಠಾಣೆಗೆ ಬರಮಾಡಿಕೊಂಡು ಅವರನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡೆನು.

ದಿಃ 01-11-2019ರಂದು ಚಾಸಾ 1ರವರು ಕರ್ತವ್ಯದಲ್ಲಿ ಇದ್ದ ಬಗ್ಗೆ ಠಾಣಾ ದಿನಚರಿಯ ಯಥಾಪ್ರತಿಯನ್ನು ಪಡೆದು ಕಡತಕೆಕ ಅಳವಡಿಸಿದೆನು. ದಿನಚರಿ ಯಥಾಪ್ರತಿ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿಯವರು ಗುರುತಿಸಿದ್ದು ಸದ್ರಿ ಪ್ರತಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ. 5 ಎ ಎಂದು ಗುರುತಿಸಲಾಯಿತು.

ದಿಃ 07-11-2019ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಅಪರಾದವು ಮೇಲ್ನೋಟಕ್ಕೆ ಕಂಡು ಬಂದ ಕಾರಣ ದೋಷಾರೋಪಣಾ ಪಟ್ಟಿ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು. ನ್ಯಾಯಾಲಯದ ಮುಂದಿರುವ ಆರೋಪಿತರೇ ನಾನು ಬಂದಿಸಿ ನ್ಯಾಯಾಲಯಕ್ಕೆ ಕಳುಹಿಸಿದ ಆರೋಪಿತರಾರಗಿರುತ್ತಾರೆ.

**ಪಿ.ಡಬ್ಲ್ಯು 5**

**ಪಾಟೀ ಸವಾಲುಃ** ಆರೋಪಿ **ಪರ ಎಸ್ ಹೆಚ್ ಕೆ. ವಕೀಲರಿಂದಃ**

ಚಾಸಾ 1ರವರು ನಿಮ್ಮ ಠಾಣೆಯಲ್ಲಿ ನಿಮ್ಮ ಆದೇಶದಂತೆ ಕೆಲಸ ನಿರ್ವಹಿಸುವ ಸಿಬ್ಬಂದಿಯಾಗಿರುತ್ತಾರೆ ಎಂದರೆ ಹೌದು. ನೀವು ದಸ್ತಗಿರಿ ಪಂಚನಾಮೆಯನ್ನು ಠಾಣೆಯಲ್ಲಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಬೆಳಿಗ್ಗೆ 8.00 ಗಂಟೆಯಿಂದ 8.30 ರವರಗೆ ಮಾಡಿರುತ್ತೇನೆ. ಸ್ಥಳ ಪಂಚನಾಮೆಯನ್ನು ನೀವು ಠಾಣೆಯಲ್ಲಿ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತೀರಿ ಎಂದರೆ ನಾನು ಠಾಣೆಯಲ್ಲಿ ಮಾಡಿರುವುದಿಲ್ಲ ಸ್ಥಳದಲ್ಲಿ ಮಾಡಿರುತ್ತೇನೆ . ನೀವು ಪಂಚರಿಗೆ ಕಾನೂನು ಬದ್ಧವಾದ ನೋಟೀಸು ನೀಡಿರುವುದಿಲ್ಲ ಎಂದರೆ ಹೌದು. ನೀವು ನಿಪಿ 2ನ್ನು ನೀವು ಠಾಣೆಯಲ್ಲಿಯೇ ಕುಳಿತು ತಯಾರಿಸಿರುವುದು ಎಂದರೆ ಸರಿಯಲ್ಲ. ನಿಮ್ಮ ಮುಂದೆ ಚಾಸಾ 2ರಿಂದ 5ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಆರೋಪಿತರ ವಿರುದ್ಧ ಕೇಸು ದಾಖಲಿಸುವ ಉದ್ದೇಶದಿಂದ ಈ ಪ್ರಕರಣದಲ್ಲಿ ಹಾಜರು ಮಾಡಿರುವ ದಾಖಲೆಗಳನ್ನು ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ನೀವು ಹೇಳಿರುವಂತಹ ಯಾವುದೇ ರೀತಿಯ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1ರವರು ನಿಮ್ಮ ಸಹೋದ್ಯೋಗಿದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿತರಿಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಾದಾರಗಳು ಇಲ್ಲದೇ ಇದರೂ ಸಹ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲಿಲಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಹೆ. ಪ್ರ.ಹಿ.ಸಿ.ನ್ಯಾ. ಉಡುಪಿ.